**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 1378/2018

ಪಿ.ಡಬ್ಲ್ಯೂ - 6

ಸಿ.ಡಬ್ಲ್ಯೂ - 8

ಹೆಸರು : ಶೈಲಜಾ ಉಮೇಶ ಬಡಿಗೇರ

ವಯಸ್ಸು : 57 ವರ್ಷ

ಉದ್ಯೋಗ : ಮನೆ ಕೆಲಸ ,

ವಾಸ : ವಾಗಳೆ ಗಲ್ಲಿ , ತಾಃ ಖಾನಾಪೂರ

ದಿನಾಂಕ 14-11-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಚಾಸಾ 1 ನನ್ನ ಗಂಡ.

ದಿಃ 28.10.2017 ರಂದು ಮುಂಜಾನೆ 11.30 ರ ಸಮಾರಿಗೆ ನನ್ನ ತವರು ಮನೆಯಲ್ಲಿ ಕಾರ್ಯಕ್ರಮ ಇದುದ್ದರಿಂದ ನಮ್ಮ ಮನೆಯವರೆಲ್ಲರೂ ಸೇರಿ ಗಡಿಂಗ್ಲಜಗೆ ಹೋಗಿದ್ದೇವು. ನಂತರ ಮರುದಿನ ಬೆಳಗ್ಗೆ 06.30 ಗಂಟೆ ಸುಮಾರಿಗೆ ಚಾಸಾ 9 ರವರು ಕರೆ ಮಾಡಿ ನಮ್ಮ ಮನೆ ಕಳುವಾಗಿದೆ ಹಾಗೂ ಯಾರೋ ನಮ್ಮ ಮನೆಯ ಕಿಲಿಯನ್ನು ಮುರಿದಿದ್ದಾರೆ ಎಂದು ಹೇಳಿರುತ್ತಾರೆ. ನಾವು ಕೂಡಲೇ ಖಾನಾಪೂರಕ್ಕೆ ಹೊರಟು ಬೆಳಗಿನ ಜಾವ 11.00 ಗಂಟೆ ಸುಮಾರಿಗೆ ಬಂದೆವು. ನಾವು ಮನೆಯನ್ನು ಪರಿಶೀಲಿಸಿದಾಗ ನಮ್ಮ ಬೆಡ್ ರೂಮನಲ್ಲಿದ್ದ ಕಪಾಟನಲ್ಲಿಯ ಕೆಲವು ಬಂಗಾರದ ಚೈನ ಹಾಗೂ ಹಣ ರೂ.500/- ಕಳುವಾಗಿದ್ದವು. ದೇವರ ಮನೆಯಲ್ಲಿನ ಕೆಲವು ಕಬ್ಬಿಣದ ನಾಣ್ಯಗಳು ಕಳುವಾಗಿದ್ದವು. ನಂತರ ನನ್ನ ಗಂಡ ಈ ಬಗ್ಗೆ ದೂರನ್ನು ನೀಡಿದ್ದು ಇರುತ್ತದೆ. ನಂತರ ಪೊಲೀಸರು ನಮ್ಮ ಮನೆಗೆ ಬಂದು ವಿಚಾರಣೆ ಮಾಡಿರುತ್ತಾರೆ. ಸ್ವಲ್ಪ ದಿನದ ನಂತರ ಪೊಲೀಸರು ನಮ್ಮ ಮನೆಯ ಹತ್ತಿರ

ನಮ್ಮ ಮನೆ ಕಳುವು ಮಾಡಿದ್ದವರನ್ನು ಕರೆದುಕೊಂಡು ಬಂದಿದ್ದರು. ಸಾಕ್ಷಿದಾರರು ಆರೋಪಿತರನ್ನು ವಿಸಿಯಲ್ಲಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ . ಎನ್ ವಾಯ ಎಂ ವಕೀಲರಿಂದಃ**

ನಾವು ಮನೆ ಕಳುವು ಮಾಡುವುದನ್ನು ಕಣ್ಣಾರೆ ನೋಡಿಲ್ಲ ಎಂದು ಸೂಚಿಸಿದರೆ ಸರಿ . ನನ್ನ ಗಂಡ ನೀಡಿದ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸಿದರೆ ಸರಿ . ಈ ಪ್ರಕರಣದ ಎಲ್ಲ ಮಾಹಿತಿ ಪೊಲೀಸರಿಗೆ ಹಾಗೂ ನನ್ನ ಗಂಡನಿಗೆ ಮಾತ್ರ ಇದೆ ಎಂದು ಸೂಚಿಸಿದರೆ ಸರಿ . ಮುದ್ದೆ ಮಾಲನ್ನು ನಾನು ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದೇನೆ ಎಂದು ಸೂಚಿಸಿದರೆ ಸರಿ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಇರುತ್ತವೆ ಎಂದು ಸೂಚಿಸಿದರೆ ಸರಿಯಲ್ಲ. ಆರೋಪಿತರನ್ನು ನಾನು ಯಾವತ್ತು ನೋಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ .

1ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.